ಕೆಲಕಾಲ ಇಥಿಯೋಪಿಯಾದಲ್ಲಿದ್ದು 1982ರಲ್ಲಿ ಸ್ವದೇಶಕ್ಕೆ ಮರಳಿಬಂದ ನಂತರ ಮತ್ತೆ ಅವರು ಉದ್ಯೋಗವನ್ನರಸಿ ನಗರಕ್ಕೆ ಮುಖಮಾಡಬಹುದಿತ್ತು. ಆದರೆ ಪೂರ್ಣಾವಧಿ ಲೇಖಕರಾಗಿ, ಕೃಷಿಕರಾಗಿ ಜೀವನ ನಡೆಸಲು ನಿರ್ಧರಿಸಿದರು. ದಕ್ಷಿಣ ಕನ್ನಡ ಜಿಲ್ಲೆಯ ಉಜಿರೆಯ ಬಳಿ ಜಮೀನು ಖರೀದಿಸಿರು. 'ವನಸಿರಿ'ಯಲ್ಲಿ ಕೃಷಿ, ಸಾಹಿತ್ಯ ಎರಡರಲ್ಲೂ ತೊಡಗಿಸಿಕೊಂಡರು.

ತಾಯ್ನಾಡಿಗೆ ಮರಳಿ ಬಂದು ಬರವಣಿಗೆಯನ್ನೇ ವೃತ್ತಿಯಾಗಿಸಿಕೊಂಡು, ಕೃಷಿಯನ್ನೂ ನೆಚ್ಚಿಕೊಂಡು ಅವರು ಬದುಕಿದ ಸಾಹಸದ ಬಗ್ಗೆ ಅಚ್ಚರಿ ಮೂಡುತ್ತದೆ. ಅವರ ದಣಿವಿರದ ದುಡಿಮೆಯ ಬಗ್ಗೆ ಅವರ ಮಡದಿ ಯಶೋದಾ ಹೇಳುತ್ತಾರೆ. 'ರಾತ್ರಿಯ ನಿದ್ರೆ ಎನ್ನುವುದನ್ನು ಕೂಡ ಇವರು ಒಂದು ಕೆಲಸವೆಂಬಂತೆ ಭಾವಿಸುತ್ತಾರೋ ಎಂದೆನಿಸುವುದುಂಟು. ಒಮ್ಮೊಮ್ಮೆ ರಾತ್ರಿ ಥಟ್ಟನೆದ್ದು ಒಂದೆರಡು ಗಂಟೆಗಳ ಕಾಲ ಬರೆಯುವುದುಂಟು. ಅದೇರೀತಿ ನಿದ್ದೆಯಿಂದೆದ್ದು, ಜಡ್ಡಾದವರನ್ನು ವಿಚಾರಿಸಲು, ಔಷಧಿ ಕೊಡಲು, ಅಥವಾ ಇನ್ನಾವುದೋ ತುರ್ತಿನ ಕೆಲಸಕ್ಕೆ ಹೊರಡುವುನ್ನು ಕಂಡಾಗ ಇವರು ರಾತ್ರಿಯನ್ನೂ ಹಗಲೆಂದೇ ಭಾವಿಸುತ್ತಾರೆ ಎಂದನಿಸುತ್ತದೆ' ('ನೆಲದ ಬದುಕು', ಅಭಿನಂದನಾ ಗ್ರಂಥ).

'ತನ್ನ ಭುಜಗಳ ದಣಿವಿನ ಅರಿವಿರದೇ ಅಟ್ಲಾಸ್ ಭೂಮಿಯನ್ನು ಹೊತ್ತುಕೊಂಡು ನಿಂತಿದ್ದನಂತೆ, ಸಾವಿರಾರು ವರ್ಷಗಳವರೆಗೆ. ಪಪ್ಪನೂ ಹಾಗೇ. ಈ ಪ್ರಪಂಚದಲ್ಲಿ ಸೂರ್ಯ, ನಕ್ಷತ್ರ, ಕಾಲಕೆಳಗಿನ ಭೂಮಿ, ಇವೆಲ್ಲಾ ಹೇಗೆ ಶಾಶ್ವತವಾಗಿವೆಯೋ, ಅಪ್ಪನೂ ಹಾಗೇ ಅಂತ ನಾನು ಅಂದುಕೊಂಡುಬಿಟ್ಟಿದ್ದೆ. ಅಪ್ಪನಿಲ್ಲದ ಪ್ರಪಂಚವನ್ನು ನನಗೆ ಊಹಿಸಲೂ ಸಾಧ್ಯವಿರಲಿಲ್ಲ' ಎಂದು ಮಗ ಸತ್ಯಜಿತ್ ಹೇಳುವುದು ನೆನಪಾಗುತ್ತದೆ. ಈ ಮಾತುಗಳು ಪ್ರತಿಫಲಿಸುವ ಮಗನ ಮನಸ್ಸಿನಲ್ಲಿ ಮೂಡಿಸಿದ ತಂದೆಯ ವ್ಯಕ್ತಿತ್ವದ ಭಾವಬಿಂಬವನ್ನು ನೆನೆದು ಅಭಿಮಾನವೆನಿಸುತ್ತದೆ. ಮನೆಯನ್ನು ಗೆದ್ದು ಮಾರನ್ನು ಗೆದ್ದ ವಿರಳ ವ್ಯಕ್ತಿತ್ವವಾಗಿ ಗಟ್ಟಿಯವರು ಗೋಚರವಾಗುತ್ತಾರೆ. ಸದಭಿರುಚಿಯ ಆಸಕ್ತಿಯನ್ನು, ಜ್ಞಾನಪಿಪಾಸೆಯನ್ನು ಮಕ್ಕಳಲ್ಲಿ ಹುಟ್ಟುಹಾಕಿ ಅವರಲ್ಲಿಯೂ ಪುಸ್ತಕಪ್ರೀತಿಯ ಚಟವನ್ನು ಬೆಳೆಸಿದ ಅವರು ಅಪ್ಪಂದಿರಿಗೆ ಮಾದರಿಯಾಗಿದ್ದರು.

ನಲವತ್ತೆಂಟುಕಾದಂಬರಿಗಳು,ಅನೇಕಸಣ್ಣಕತೆಗಳು, ನಾಟಕಗಳು, ವಿಮರ್ಶೆ, ಪ್ರವಾಸಕಥನ, ರೇಡಿಯೋ ನಾಟಕಗಳು, ಕವನಗಳು, ಮಕ್ಕಳ ಸಾಹಿತ್ಯ, ವೈಚಾರಿಕ, ಶಿಕ್ಷಣಸಂಬಂಧಿ ಬರಹಗಳು - ಹೀಗೆ ಬರವಣಿಗೆಯ ಸಮೃದ್ಧಿ ಮತ್ತು ವೈವಿಧ್ಯದ ಒಡೆಯರಾಗಿರುವ ಗಟ್ಟಿಯವರು ತಮ್ಮ ಸಾಹಿತ್ಯಸೃಷ್ಟಿಯಲ್ಲಿ ಇರಿಸಿದ್ದ ನಂಬಿಕೆ ವಿಶೇಷವಾದುದು. ಅವರು ಹೇಳುತ್ತಾರೆ - "ಎಲ್ಲರೂ ನನ್ನ ಕವಿತೆಗಳನ್ನು ಓದಲಿ ಅಥವಾ ನನ್ನ ಕಾದಂಬರಿಗಳನ್ನು ಓದಲಿ ಎಂದು ಬಯಸುವುದು ಹುಂಬತನವೆನಿಸೀತು. ಯಾರಿಗೆ ಯಾವುದು ಇಷ್ಟವೋ ಅದನ್ನು ಅವರು ಓದಲಿ. ಆದರೆ ಹೆಚ್ಚು ಜನರು ಓದಲಿ. ಓದುವುದಷ್ಟೇ ಅಲ್ಲ. ಓದಿದ್ದರ ಕುರಿತು ಚರ್ಚಿಸಲಿ, ಸಾಧ್ಯವಾದಾಗ ಲೇಖಕನ ಜೊತೆಯಲ್ಲಿಯೂ ಚರ್ಚಿಸಲಿ. ಸಾಹಿತ್ಯ ಕೇವಲ ಪುಸ್ತಕವೆನಿಸದೆ, ಒಂದು ಸಾಮಾಜಿಕ-ಸಾಂಸ್ಕೃತಿಕ ಪ್ರಕ್ರಿಯೆಯಾಗಲಿ. ಲೇಖಕರು ನಂಬಿರುವ 'ಸಾಹಿತ್ಯ'ದ ಮೂಲಕ ನಡೆಯುವ ಕ್ರಾಂತಿ ಇದೇ ಮತ್ತು ಇಷ್ಟೇ; ದಂಗೆಯಲ್ಲ, ದೊಂಬಿಯಲ್ಲ. ಇದೆಲ್ಲ ನಾಳೆಯೇ ಆಗುವುದಿಲ್ಲ. ಆದರೆ ನಿಧಾನವಾಗಿ ಆಗುತ್ತದೆ. ಇದಕ್ಕಾಗಿ ಲೇಖಕರು ಬರೆಯುತ್ತಿರಬೇಕು. ಓದುಗರು ಓದುತ್ತಿರಬೇಕು". ಈ ಮಾತುಗಳು ಹೊಸತಲೆಮಾರಿಗೆ ಕೈದೀವಿಗೆಯಂತೆ ಇವೆಯಲ್ಲವೇ.

ಕಾಸರಗೋಡಿನಲ್ಲಿ ಅಥವಾ ದ.ಕ. ಜಿಲ್ಲೆಯಲ್ಲಿ ನಡೆದ ಸಭೆ ಅಥವಾ ಸಮ್ಮೇಳನಗಳಲ್ಲಿ ಅವರ ಜೊತೆ ಮಾತುಕತೆಯಾಡಿದಾಗ ಎಷ್ಟು ಸರಳವಾಗಿ ಕಿರಿಯ ಪೀಳಿಗೆಯ ಜೊತೆ ನಡೆದುಕೊಳ್ಳುತ್ತಾರಲ್ಲ ಎಂದು ಅನಿಸಿತ್ತು. ಬದಲಾದ ಕಾಲಮಾನದ ಅರಿವಿನ ಜೊತೆಗೆ ಯುವಪೀಳಿಗೆಯ ಮೇಲೆ ಅವರಿಗೆ ಭರವಸೆ ಇತ್ತು.

ಮನುಷ್ಯ ಸಂಬಂಧಗಳ ನಿಗೂಢಗಳು,ಸಾಮಾಜಿಕ ವ್ಯವಸ್ಥೆಯ ವೈರುಧ್ಯಗಳು ಅವರನ್ನು ಕಾಡಿದಂತೆಯೇ ವಿಜ್ಞಾನಲೋಕದ ವಿಸ್ಮಯಗಳೂ ನಿರಂತರ ಕಾಡಿವೆ. ನಿತ್ಯಕುತೂಹಲಿಯಾಗಿದ್ದ ಅವರಿಗೆ, ಬರೆಯಲು ಬೇಕಾದ ವಸ್ತುವಿಷಯಗಳಿಗೆ ಬರವಿರಲಿಲ್ಲ. ಕಾಸರಗೋಡಿನ ಮಣ್ಣಿನಲ್ಲಿ ಮೂಡಿದ ಆ ಪುಟ್ಟಪಾದಗಳು ಬೆಳೆಬೆಳೆದು ದಣಿವಿರದ ಯಾನದಲ್ಲಿ ಗಳಿಸಿದ ಅನುಭವ ಸಂಪನ್ನತೆ ಅಗಾಧವಾದುದು.

●